ಬಿಡುಗಡೆಯಾಗಿತ್ತು. ಜೊತೆಗೆ ಆ ಸಕ್ಕರೆ ಕಾರ್ಖಾನೆಯನ್ನು .....

ಅಧ್ಯಕ್ಷರು : ಇದೇನಿದು ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಈ ರೀತಿ ಕೇಳುತ್ತಾ ಹೋದರೆ ಹೇಗೆ ಮುಗಿಸುವುದು ? ಬೇರೆ ರೂಪದಲ್ಲಿ ತನ್ನಿ.

ಶ್ರೀ ಎಂ. ಶ್ರೀನಿವಾಸ : ಇದು ಇಡೀ ಜಿಲ್ಲೆಯ ಹಾಗೂ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು : ಸರಿ, ಹೀಗಿರುವಾಗ ನೀವು ಏಕೆ ಶೂನ್ಯವೇಳೆಯಲ್ಲಿ ಕೊಟ್ಟಿರಿ. ಬೇರೆ ರೂಪದಲ್ಲಿ ತರಬೇಕಾಗಿತ್ತು. ನೀವು ಶೂನ್ಯವೇಳೆಯಲ್ಲಿ ಕೇಳಿ ಎಲ್ಲವನ್ನೂ ಕೇಳಿಕೊಂಡು ಕುಳಿತರೆ ಹೇಗೆ ?

ಶ್ರೀ ಎಂ. ಶ್ರೀನಿವಾಸ : ನನ್ನ ಮನವಿ ಇಷ್ಟೆ. ಜನಪ್ರತಿನಿಧಿಗಳನ್ನು ಕರೆದು ಮತ್ತೊಮ್ಮೆ ಈ ಬಗ್ಗೆ ಮಾತನಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಅವರು ಒಪ್ಪಿದ್ದಾರೆ ಬಿಡಿ. ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ವಿರೋಧ ಪಕ್ಷದ ನಾಯಕರು ಮೂರು ದಿವಸಗಳಿಂದ ಮಾತನಾಡುತ್ತಿದ್ದಾರೆ, ನಮ್ಮದೇನೂ ಅಭ್ಯಂತರವಿಲ್ಲ. ಇವತ್ತು ಅವರು ಇನ್ನೂ ಒಂದು ಗಂಟೆ ಮಾತನಾಡುತ್ತಾರೆ, ನಂತರ ಮಾನ್ಯ ಜಯಚಂದ್ರರವರು ಮಾತನಾಡುತ್ತಾರೆ. ನಮ್ಮ ಪಕ್ಷದಲ್ಲಿ ಮಾನ್ಯ ಶಿವಲಿಂಗೇಗೌಡರವರು ಸೇರಿದಂತೆ 4–5 ಜನ ಮಾತನಾಡುತ್ತಾರೆ. ನಾಳೆ ಬೆಳಿಗ್ಗೆ ನಾನು ಮಾತನಾಡುತ್ತೇನೆ ಈ ವಿಚಾರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಇನ್ನು ಶುರುವಾಗಿಲ್ಲ. ಈಗ ಶೂನ್ಯವೇಳೆ.

ಶ್ರೀ ಸಿ.ಎಸ್. ಪುಟ್ಟರಾಜು : ಅಲ್ಲಿ ರೈತರ ಪರಿಸ್ಥಿತಿಯ ಬಗ್ಗೆ ಗಮನಿಸಬೇಕಾಗುತ್ತದೆ.

ಅಧ್ಯಕ್ಷರು : ಸಾಕು ಬಿಡಿ. ಶೂನ್ಯವೇಳೆಯಲ್ಲಿ ಈ ರೀತಿಯಾದರೆ ಹೇಗೆ ? ಮುಖ್ಯಮಂತ್ರಿಗಳು ಅಲ್ಲಿ ಸಭೆ ಕರೆಯುತ್ತೇನೆಂದು ಹೇಳಿದ್ದಾರೆ. ನೀವು ಪ್ರಸ್ತಾಪ ಮಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ, ಸೆಳೆಯಲೋ ಬೇಡವೋ ?

ಶ್ರೀ ಎಸ್. ಸುರೇಶ್‌ಕುಮಾರ್ : ಇದು ಗಮನ ಸೆಳೆಯುವ ಸೂಚನೆ ಅಲ್ಲ. ಶೂನ್ಯವೇಳೆ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆ ಅಲ್ಲ. ಶೂನ್ಯವೇಳೆ.

ಶ್ರೀ ಸಿದ್ಧರಾಮಯ್ಯ : ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ನೀವು ನಾಳೆ ಉತ್ತರ

ಕೊಡಿಸಿ.

ಶ್ರೀ ಎಸ್. ಸುರೇಶ್ ಕುಮಾರ್ : ಅವರದು ನಾಳೆ ಪ್ರಶ್ನೋತ್ತರವಿದೆ ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು) : ಅವರು ನಾಳೆ ಉತ್ತರ ಕೊಡಲಿ. ಇಂಜಿನಿಯರಿಂಗ್ ಕೌನ್ಸಿಲಿಂಗ್ ಏನು ಇದೆ, ಅದು 7 ರಂದು ಅಂದರೆ ನಾಳೆ ನಡೆಯಬೇಕಾಗಿತ್ತು. ಈಗ ಎರಡನೇ ಬಾರಿ ಅದನ್ನು ಮುಂದೂಡಿ ಬಿಟ್ಟಿದ್ದಾರೆ.

ಅಧ್ಯಕ್ಷರು : ಅಲ್ಲಲ್ಲಿ ಮಾತನಾಡಬೇಡಿ.

ಶ್ರೀ ಸಿದ್ಧರಾಮಯ್ಯ : ಈ ಹಿಂದೆ ಡೇಟ್ ನಿಗದಿಯಾಗಿದ್ದಂತೆ ಜೂನ್ 18 ಕ್ಕೆ ಕೌನ್ಸಿಲಿಂಗ್ ನಡೆಯಬೇಕಾಗಿತ್ತು. ಆ ದಿನ ಮುಂದೂಡಿ ಜುಲೈ 7 ರಂದು ಮಾಡಲಾಗುವುದು ಎಂದರು. ನಾಳೆ ಜುಲೈ 7 ರಂದು ನಡೆಯಬೇಕಾದ ಕೌನ್ಸಿಲಿಂಗ್ may be on July 14 ಎಂದು ಹೇಳುತ್ತಾರೆ. ಅದು ಕೂಡ ಸ್ಪಷ್ಟವಾಗಿಲ್ಲ. 14ನೇ ತಾರೀಖು ನಡೆಯುತ್ತದೆಯೋ ಗೊತ್ತಿಲ್ಲ. ಈಗ ಕಾರಣ ಏನು ಕೊಡುತ್ತಾರೆಂದರೆ, AICTE ಯವರು approval ಕೊಟ್ಟಿಲ್ಲ. ಇನ್ನೂ ಸುಮಾರು 37 ಕಾಲೇಜುಗಳಿಗೆ AICTE ಯವರು approval ಕೊಡಬೇಕಾಗಿತ್ತು. ಆ approval ಸಿಕ್ಕದೇ ಇರುವುದರಿಂದ ನಾವು ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಇದರ ಪರಿಣಾಮವಾಗಿ ಜನಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಅವರ ಪೋಷಕರಿಗೆ ಆತಂಕ. ಒಂದು ರೀತಿಯ ಗೊಂದಲ ಸೃಷ್ಟಿಯಾಗಿದೆ. ಈ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಸರ್ಕಾರ ಕೊಡಬೇಕು. 14 ಕ್ಕೆ ಮಾಡುತ್ತೇವೆಂದು ಹೇಳಿರುವುದರಿಂದ 14 ನೇ ತಾರೀಖಿನಂದೇ ಮಾಡಬೇಕು. ಏಕೆಂದರೆ ಈಗಾಗಲೇ ಬಹಳ ಡಿಲೆಯಾಗಿದೆ. ಏಕೆಂದರೆ, ಈ ಮೊದಲು ಜೂನ್ 18ಕ್ಕೆ ಆಗಬೇಕಾಗಿತ್ತು. ಅದು ಜುಲೈ 7ಕ್ಕೆ ಎಂದು ಮುಂದೂಡಿ ಜುಲೈ 7 ರಂದು ಮಾಡದೇ ಜುಲೈ 14 ಕ್ಕೆ ಎಂದು ಹೇಳಿದ್ದಾರೆ.

That is also not certain. ಇದರ ಬಗ್ಗೆ ಜನಗಳ ಮನಸ್ಸಿನಲ್ಲಿ ಆತಂಕ, ಗೊಂದಲ ನಿರ್ಮಾಣವಾಗಿದ್ದರಿಂದ, ಸರ್ಕಾರ ಇದನ್ನು ಪರಿಹರಿಸತಕ್ಕಂಥದ್ದು ಅತ್ಯಂತ ಅವಶ್ಯಕವಾಗಿದೆ. ಆದ್ದರಿಂದ, ಕೂಡಲೇ ಒಂದು ಸ್ಪಷ್ಟವಾದಂಥ ನಿಲುವು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಇರತಕ್ಕಂಥ ಆಂತಕವನ್ನು ಬಗೆಹರಿಸಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಇವತ್ತೆ ಸಾಧ್ಯವಾದರೆ ಒಂದು ಹೇಳಿಕೆ ಕೊಟ್ಟರೆ ಒಳ್ಳೆಯದು. ಈಗ ಮಂತ್ರಿಗಳಿಲ್ಲ. ಆದ್ದರಿಂದ, ಇದರ ಬಗ್ಗೆ ನಾಳೆ ಹೇಳಿಕೆ ಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಉತ್ತರ ಕೊಡುತ್ತೇನೆ. ನಾನು ಕೊಡುವ ಉತ್ತರ ಸಮಾಧಾನವಾಗದಿದ್ದರೆ ನಾಳೆ ದಿವಸ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ನೀವು ಕೊಡುವ ಉತ್ತರವೇ ನಿಮಗೆ ಸಮಾಧಾನ ಇಲ್ಲದೆ ಇರುವುದರಿಂದ ನಾಳೆ ದಿವಸ ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಸುರೇಶ್ ಕುಮಾರ್ : ನಾನು ಇನ್ನು ಉತ್ತರವೆ ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಹೇಳುವ ರೀತಿಯಲ್ಲಿಯೇ ಸಮಾಧಾನ ಕಾಣುತ್ತಿಲ್ಲ.

ಶ್ರೀ ಸುರೇಶ್ ಕುಮಾರ್ : ನಿಮ್ಮ ಯಾರ್ಡ್‌ಸ್ಟಿಕ್ ನನಗೆ ಗೊತ್ತಿದೆ. ಆದ್ದರಿಂದ, ನಾನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹೌದು. Very good. ನೀವೊಬ್ಬರೆ ಈ ರೀತಿಯಾಗಿ ನನ್ನ ಬಗ್ಗೆ ಅರ್ಥ ಮಾಡಿಕೊಂಡಿರುವುದು.

ವಿಷಯ:– ಕಾಡಾನೆ ಹಾವಳಿಯನ್ನು ತಡೆಗಟ್ಟುವುದು ಮತ್ತು ಮೃತರ ಕುಟುಂಬಕ್ಕೆ ಪರಿಹಾರವನ್ನು ಹೆಚ್ಚಿಸುವ ಬಗ್ಗೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಕಾಡಾನೆ ಹಾವಳಿಯ ಬಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. ನಿನ್ನೆದಿವಸ ನನ್ನ ಕ್ಷೇತ್ರವಾದ ಸೋಮವಾರಪೇಟೆ ತಾಲ್ಲೂಕಿನಲ್ಲಿ ಕಾಡಾನೆ ತುಳಿತದಿಂದ ಇಬ್ಬರು ಮೃತಪಟ್ಟಿದ್ದಾರೆ. ಕಾಡಾನೆ ತುಳಿತದಿಂದ ಮೃತಪಟ್ಟವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಮಾತ್ರ ಕೊಡುವಂಥ ಪರಿಸ್ಥಿತಿಯಾಗಿದೆ. ನಾನು 1995ರಲ್ಲಿ ವಿಧಾನಸಭೆಯಲ್ಲಿದ್ದಂಥ ಸಂದರ್ಭದಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದರು. ಆಗ ಮೃತ ಕುಟುಂಬಕ್ಕೆ ಕೇವಲ 25 ಸಾವಿರ ರೂಪಾಯಿಗಳನ್ನು ಮಾತ್ರ ಕೊಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ ಅದನ್ನು 50 ಸಾವಿರ ರೂಪಾಯಿಗೆ ಏರಿಸಿದರು. ಅದಾದನಂತರ ಸನ್ಮಾನ್ಯ ಜೆ.ಹೆಚ್.ಪಟೇಲರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅದನ್ನು ಒಂದು ಲಕ್ಷ ರೂಪಾಯಿಗೆ ಏರಿಸತಕ್ಕಂಥ ಕೆಲಸವನ್ನು ಮಾಡಿದರು. ಇವತ್ತಿನ ದಿವಸ ಕಾಡಾನೆ ಹಾವಳಿಯಿಂದ ಜನ ಸತ್ತರೆ ಅದಕ್ಕೆ ಬೆಲೆ ಇಲ್ಲದಂಥ ಪರಿಸ್ಥಿತಿಯಾಗಿದೆ. ಆ ಕಾಡಾನೆ ಹಾವಳಿಯನ್ನು ಸಮಗ್ರವಾಗಿ ತಡೆಗಟ್ಟುವುದಕ್ಕೋಸ್ಕರ ಒಂದು ಚರ್ಚೆ ಕೂಡ ಆಗಬೇಕಾಗಿದೆ. ಸನ್ಮಾನ್ಯ ಅಧ್ಯಕ್ಷರ